ಕರ್ನಾಟಕ ವಿಧಾನ ಪರಿಷತ್

1. ಸದಸ್ಯರ ಹೆಸರು : ಶ್ರೀ ಐವನ್ 'ಡಿ'ಸೋಜಾ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2032
3. ಉತ್ತರಿಸಬೇಕಾದ ದಿನಾಂಕ : 27-03-2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಕಿಂಡಿ ಅಣೆಕಟ್ಟುಗಳನ್ನು ನರೇಗಾ ಯೋಜನೆ ಅಡಿಯಲ್ಲಿ ಕಟ್ಟಲಾಗಿದೆ; ಒಂದು ಅಣೆಕಟ್ಟೆಗೆ ತಗಲುವ ವೆಚ್ಚ ಎಷ್ಟು; (ಸಂಪೂರ್ಣ ವಿವರ ನೀಡುವುದು)	ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 456 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 70 ಕಿಂಡಿ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಒಂದು ಕಿಂಡಿ ಅಣೆಕಟ್ಟು ನಿರ್ಮಾಣಕ್ಕಾಗಿ (ಉದ್ದ 7 ಮೀ.) ತಗಲುವ ಅಂದಾಜು ವೆಚ್ಚ ರೂ. 5.00 ಲಕ್ಷ. ತಾಲ್ಲೂಕುವಾರು ವಿವರಗಳನ್ನು ***ಅನುಬಂಧ-1*** ರಲ್ಲಿ ನೀಡಿದೆ.
ಆ)	ನರೇಗಾ ಯೋಜನೆ ಅನ್ವಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಷ್ಟು ನೀರಾವರಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)	ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 456 ಕಿಂಡಿ ಅಣೆಕಟ್ಟುಗಳು, 4767 ತೆರೆದ ಬಾವಿಗಳು ಮತ್ತು 769 ಕೊಳವೆಬಾವಿ ಮರು ಪೂರಣ ಘಟಕಗಳಂತಹ ನೀರಾವರಿ ಕಾಮಗಾರಿಗಳು/ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ 9 ಕಿಂಡಿ ಅಣೆಕಟ್ಟುಗಳು, 5296 ತೆರೆದ ಬಾವಿಗಳು, 95 ಕೊಳವೆಬಾವಿ ಮರು ಪೂರಣ ಘಟಕಗಳು, 241 ಕೆರೆ ಅಭಿವೃದ್ಧಿ/ಹೂಳೆತ್ತುವ, 539 ತೋಡು ಹೂಳೆತ್ತುವ ಮತ್ತು 55 ಇತರೆ ನೀರಾವರಿ ಕಾಮಗಾರಿಗಳು/ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ತಾಲ್ಲೂಕುವಾರು ವಿವರಗಳನ್ನು ***ಅನುಬಂಧ-2*** ರಲ್ಲಿ ನೀಡಿದೆ.
ಇ)	ನೀರಾವರಿ ಯೋಜನೆಗಳನ್ನು ನರೇಗಾದಲ್ಲಿ ಕೈಗೊಂಡಿರುವ ನೀರಿನ ಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗಿದೆಯೇ; ಈ ಬಗ್ಗೆ ಸರ್ಕಾರದಿಂದ ಮಾಹಿತಿ ಸಂಗ್ರಹಿಸಲಾಗಿದೆಯೇ; ಇದ್ದಲ್ಲಿ, ವಿವರ ನೀಡುವುದು?	ಹೌದು. ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಮೇಲೆ ತಿಳಿಸಿರುವ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ಅಂತರ್ಜಲ ಮಟ್ಟವನ್ನು ಹೆಚ್ಚಿನ ಅವಧಿಯವರೆಗೆ ಕಾಯ್ದುಕೊಳ್ಳಲು ಸಹಕಾರಿಯಾಗಿರುತ್ತದೆ. ಹೌದು. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಕೇಂದ್ರ ಅಂತರ್ಜಲ ಮಂಡಳಿಯವರು (Central Ground Water Board) ನೀಡಿರುವ ವರದಿಯಂತೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಿಸಲಾದ ಬಹು ಕಮಾನು ತಡೆ ಅಣೆಕಟ್ಟುಗಳ ಸುತ್ತಲೂ ಅಂತರ್ಜಲ ಮಟ್ಟವು ಹೆಚ್ಚು ಆಗಿರುವುದು ಕಂಡುಬಂದಿರುತ್ತದೆ. ರೈತರು ಸಹ ಈ ಕಾಮಗಾರಿಗಳಿಂದ ಪ್ರಯೋಜನವಾಗಿದೆ ಎಂದು ತಿಳಿಸಿರುತ್ತಾರೆ.

ಸಂಖ್ಯೆ: ಗ್ರಾಅಪ 38(144) ಉಖಾಯೋ 2019

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

(2)

ಅನುಬಂಧ-1

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2032

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗೊಂಡಿರುವ ಕಿಂಡಿ ಅಣೆಕಟ್ಟುಗಳ ವಿವರಗಳು

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಉತ್ಪತ್ತಿಯಾದ ಮಾನವ ದಿನಗಳ ಸಂಖ್ಯೆ	ಭರಿಸಿದ ವೆಚ್ಚ (ರೂ. ಲಕ್ಷಗಳಲ್ಲಿ)
1	ದಕ್ಷಿಣ ಕನ್ನಡ	ಬಂಟ್ವಾಳ	99	114	62666	323.10
2	ದಕ್ಷಿಣ ಕನ್ನಡ	ಬೆಳ್ತಂಗಡಿ	85	106	31587	280.06
3	ದಕ್ಷಿಣ ಕನ್ನಡ	ಮಂಗಳೂರು	43	45	18470	147.63
4	ದಕ್ಷಿಣ ಕನ್ನಡ	ಪುತ್ತೂರು	78	95	32745	295.40
5	ದಕ್ಷಿಣ ಕನ್ನಡ	ಸುಳ್ಯ	88	96	26270	341.55
ಒಟ್ಟು			**393**	**456**	**171738**	**1387.74**
6	ಉತ್ತರ ಕನ್ನಡ	ಅಂಕೋಲ	2	2	530	4.09
7	ಉತ್ತರ ಕನ್ನಡ	ಭಟ್ಕಳ	0	1	0	0.00
8	ಉತ್ತರ ಕನ್ನಡ	ಹಳಿಯಾಳ	0	0	0	0.00
9	ಉತ್ತರ ಕನ್ನಡ	ಹೊನ್ನಾವರ	0	9	0	0.00
10	ಉತ್ತರ ಕನ್ನಡ	ಕಾರವಾರ	2	2	847	2.53
11	ಉತ್ತರ ಕನ್ನಡ	ಕುಮುಟ	8	9	736	12.04
12	ಉತ್ತರ ಕನ್ನಡ	ಮುಂಡಗೋಡ	3	3	1385	7.99
13	ಉತ್ತರ ಕನ್ನಡ	ಸಿದ್ದಾಪುರ	1	2	451	3.90
14	ಉತ್ತರ ಕನ್ನಡ	ಶಿರಸಿ	0	5	0	0.00
15	ಉತ್ತರ ಕನ್ನಡ	ಜೋಯಿಡಾ	27	32	9037	39.11
16	ಉತ್ತರ ಕನ್ನಡ	ಯಲ್ಲಾಪುರ	1	5	92	3.00
ಒಟ್ಟು			**44**	**70**	**13078**	**72.66**

ಅನುಬಂಧ-2

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2032

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೈಗೊಂಡಿರುವ ನೀರಾವರಿ ಕಾರ್ಯಕ್ರಮಗಳ ವಿವರಗಳು

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಕಿಂಡಿ ಅಣೆಕಟ್ಟು ಕಾಮಗಾರಿಗಳ ಸಂಖ್ಯೆ	ತೆರೆದ ಬಾವಿ ಕಾಮಗಾರಿಗಳ ಸಂಖ್ಯೆ	ಕೊಳವೆ ಬಾವಿ ಮರು ಪೂರಣ ಘಟಕ ಕಾಮಗಾರಿಗಳ ಸಂಖ್ಯೆ	ಕೆರೆ ಅಭಿವೃದ್ಧಿ/ ಹೂಳೆತ್ತುವ ಕಾಮಗಾರಿಗಳ ಸಂಖ್ಯೆ	ತೋಡು ಹೂಳೆತ್ತುವ ಕಾಮಗಾರಿಗಳ ಸಂಖ್ಯೆ	ಇತರೆ ನೀರಾವರಿ ಕಾಮಗಾರಿಗಳ ಸಂಖ್ಯೆ
1	ದಕ್ಷಿಣ ಕನ್ನಡ	ಬಂಟ್ವಾಳ	114	807	183	0	0	0
2	ದಕ್ಷಿಣ ಕನ್ನಡ	ಬೆಳ್ತಂಗಡಿ	106	1059	93	0	0	0
3	ದಕ್ಷಿಣ ಕನ್ನಡ	ಮಂಗಳೂರು	45	1303	99	0	0	0
4	ದಕ್ಷಿಣ ಕನ್ನಡ	ಪುತ್ತೂರು	95	771	247	0	0	0
5	ದಕ್ಷಿಣ ಕನ್ನಡ	ಸುಳ್ಯ	96	827	147	0	0	0
ಒಟ್ಟು			**456**	**4767**	**769**	**0**	**0**	**0**
6	ಉಡುಪಿ	ಉಡುಪಿ	0	1841	15	23	125	0
7	ಉತ್ತರ ಕನ್ನಡ	ಕುಂದಾಪುರ	4	2793	15	200	414	0
8	ಉತ್ತರ ಕನ್ನಡ	ಕಾರ್ಕಳ	5	662	65	18	0	55
ಒಟ್ಟು			**9**	**5296**	**95**	**241**	**539**	**55**